ದಿನಾಂಕಃ 29.07.2025 ರಂದು ಪಿ.ಡಬ್ಲ್ಯೂ-1ರವರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರಿದ ಮುಖ್ಯ ವಿಚಾರಣೆಃ ಶ್ರೀ ಸಿ.ಪಿ.ಯು ವಕೀಲರಿಂದಃ

1. ಜನನ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ-4 ಎಂದು ಗುರುತಿಸಲಾಯಿತು.
2. ಆರ್.ಟಿ.ಸಿ.ಗಳನ್ನು ಹಾಜರುಪಡಿಸಿದ್ದು ಅದನ್ನು ನಿಪಿ-5 ರಿಂದ 7 ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಶ್ರೀ ಎಂ.ಡಿ.ವಿ. ವಕೀಲರಿಂದಃ**

1. ನಾನು ಬಿ.ಎ. ಬಿ.ಎಡ್. ಪದವೀದರರು. 2015-16 ರಲ್ಲಿ ಪದವಿ ಪಡೆದುಕೊಂಡಿರುತ್ತೇನೆ. ವಿದ್ಯಾಭ್ಯಾಸ ಆದ ನಂತರ ಖಾಸಗೀ ಶಾಲೆಯಲ್ಲಿ ಶಿಕ್ಷಕರಾಗಿ ಕೆಲಸ ಮಾಡುತ್ತಿದ್ದೆನು. ಮದುವೆಯಾಗುವವರೆಗೂ ಕೆಲಸ ಮಾಡುತ್ತಿದ್ದೆ. ನಮ್ಮ ತಂದೆಗೆ ನಾವು 4 ಜನ ಮಕ್ಕಳು. ನಾನು 3ನೇ ಮಗಳು. ವಿವಾಹವಾದ ನಂತರ ಬೆಂಗಳೂರಿನಲ್ಲಿ ವಾಸ ಇದ್ದೆ ಎಂದರೆ ಸರಿ. ಬೆಂಗಳೂರಿನಲ್ಲಿ ನಾನು ಶಿಕ್ಷಕಿಯಾಗಿ ಕೆಲಸ ಮಾಡುತ್ತಿದ್ದೆ ಎಂದರೆ ಸರಿಯಲ್ಲ. ಟೆಲಿಕಾಲಿಂಗ್ ನಲ್ಲಿ ಕೆಲಸ ಮಾಡುತ್ತಿದ್ದೆ. ಎದುರುದಾರರು ಅವರ ತಂದೆಗೆ ಒಬ್ಬನೇ ಮಗ ಎಂದರೆ ಸರಿ. ಮಗಳು ಇರುತ್ತಾರೆ. ಸದರಿ ಮಗಳಿಗೆ

ವಿವಾಹವಾಗಿರುತ್ತದೆ ಎಂದರೆ ಸರಿ.

2. ನಮ್ಮ ವಿವಾಹ ಎದುರುದಾರರ ಖರ್ಚಿನಲ್ಲಿ ಆಗಿರುತ್ತದೆ ಎಂದರೆ ಸರಿಯಲ್ಲ. ನನ್ನ ತಂದೆ ತಾಯಿಗೆ ಕುಟುಂಬದಲ್ಲಿ ಆಸ್ತಿ ಇದೆಯೇ ಎಂದರೆ ಇದೆ. ಒಂದೂವರೆ ಎಕರೆ ಜಮೀನಿರುತ್ತದೆ. ಮಳೆ ಆಶ್ರಿತ ಜಮೀನ ಎಂದರೆ ಹೌದು. ನನ್ನ ತವರು ಮನೆಯಲ್ಲಿ ಆರ್ಥಿಕ ಸ್ಥಿತಿ ಚೆನ್ನಾಗಿಲ್ಲದ ಕಾರಣ ಎದುರುದಾರರು ನಮ್ಮಿಂದ ಏನೂ ನಿರೀಕ್ಷೆ ಮಾಡದೆ ಅವರೇ ಮದುವೆ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಮದುವೆ ಖರ್ಚಿಗೆ ಹೇಗೆ ನನ್ನ ತಂದೆ ತಾಯಿ ನಿಭಾಯಿಸಿರುತ್ತಾರೆ ಎಂದರೆ ನನ್ನ ತಮ್ಮ ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿದ್ದು ಅವರೇ ಖರ್ಚನ್ನು ವಹಿಸಿರುತ್ತಾರೆ. ನನ್ನ ತಮ್ಮ ಎಂ.ಕಾಂ. ಪದವೀಧರ. ಕಂಪೆನಿ ಹೆಸರು ಗೊತ್ತಿರುವುದಿಲ್ಲ.

3. ಬೆಂಗಳೂರಿನಲ್ಲಿ ವಾಸ ಇದ್ದಾಗ ಎದುರುದಾರರ ತಂದೆ ತಾಯಿ ಬಂದು ಹೋಗುತ್ತಿದ್ದರು ಎಂದರೆ ಸರಿ. ಕೋವಿಡ್-19 ಸಮಯದಲ್ಲಿ ಎದುರುದಾರರ ಕೆಲಸಕ್ಕೆ ತೊಂದರೆಯಾಗಿರುತ್ತದೆ ಎಂದರೆ ಕೆಲಸ ಬಿಟ್ಟಿರುವುದಿಲ್ಲ ಆದರೆ ತೊಂದರೆ ಇರುತ್ತದೆ ಎಂದು ತಿಳಿಸಿರುತ್ತಾರೆ. ಎದುರುದಾರರನ್ನು ಸದರಿ ಸಮಯದಲ್ಲಿ ಕೆಲಸದಿಂದ ತೆಗೆದುಹಾಕಿರುತ್ತಾರೆ ಎಂದರೆ ಸರಿಯಲ್ಲ. ಆದ ಕಾರಣ ಊರಿಗೆ ವಾಪಸ್ಸು ಹೋಗುವಂತೆ ನನಗೆ ಕೇಳಿಕೊಂಡಿರುತ್ತಾರೆ ಎಂದರೆ ಸರಿಯಲ್ಲ, ಆಗ ನಾನು ಎದುರುದಾರರ ಹಳ್ಳಿ ಮನೆಗೆ ಬರಲು

ನಿರಾಕರಿಸಿರುತ್ತೇನೆ ಎಂದರೆ ಸರಿಯಲ್ಲ.

4. ಒಂದೂವರೆ ಎಕರೆ ಆಸ್ತಿಯ ಒಳಗಡೆ ಆರ್.ಸಿ.ಸಿ. ಮನೆ ನಿರ್ಮಿಸಿಕೊಂಡು ಎದುರುದಾರರ ತಂದೆ ತಾಯಿ ವಾಸ ಇದ್ದಾರೆ ಎಂದರೆ ಸರಿ. ಎದುರುದಾರರ ತಂದೆಗೆ 70 ವರ್ಷ, ತಾಯಿಗೆ 65 ವರ್ಷ ಎಂದರೆ ತಂದೆಗೆ 60 ವರ್ಷ, ತಾಯಿಗೆ 55 ವರ್ಷ ಆಗಿರುತ್ತದೆ. ಎದುರುದಾರರ ತಂದೆ ತಾಯಿಗೆ ವಯಸ್ಸಾಗಿದ್ದ ಕಾರಣ ಹಳ್ಳಿಗೆ ತೆರಳಿ ಜಮೀನು ಕೆಲಸ ಮಾಡುವಂತೆ ನನ್ನ ಬಳಿ ಕೇಳಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಆಗ ಎದುರುದಾರರು ಊರಿಗೆ ಹೋಗಬಾರದೆಂದು ಮತ್ತು ಊರಿನಿಂದ ತಂದೆ ತಾಯಿ ಬರಬಾರದು ಎಂದು ತಕರಾರು ಮಾಡಿರುತ್ತೇನೆ ಎಂದರೆ ಸರಿಯಲ್ಲ.

5. ಎದುರುದಾರರು ಯಾವ ರೀತಿಯಲ್ಲಿ ತೊಂದರೆ ಕೊಡುತ್ತಿದ್ದರು ಎಂದರೆ ಮಧ್ಯಪಾನ ಸೇವನೆ ಮಾಡಿ ತೊಂದರೆ ಕೊಡುತ್ತಿದ್ದರು. ಇದಕ್ಕೆ ಸಂಬಂಧಪಟ್ಟಂತೆ ದೂರು ದಾಖಲಿಸಿದ್ದೀರ ಎಂದರೆ ಇಲ್ಲ. ಯಾರು ನನ್ನನ್ನು ಎದುರುದಾರರ ಊರಿಗೆ ಕರೆದುಕೊಂಡು ಹೋಗಿರುತ್ತಾರೆ ಎಂದರೆ ಕೋವಿಡ್ ಸಮಯದಲ್ಲಿ ಎದುರುದಾರರೇ ಕರೆದುಕೊಂಡು ಹೋಗಿರುತ್ತಾರೆ. ಎಷ್ಟು ಸಮಯ ಊರಿನಲ್ಲಿದ್ದೆ ಎಂದರೆ ಒಂದೂವರೆ ತಿಂಗಳು. ಆ ಸಮಯದಲ್ಲಿ ಎದುರುದಾರರು ನನ್ನೊಂದಿಗೆ ವಾಸ ಇದ್ದರು ಎಂದರೆ ಸರಿಯಲ್ಲ. ಎದುರುದಾರರ ತಂದೆ ತಾಯಿ ಯಾವುದೇ ತಪ್ಪು ಮಾಡದಿದ್ದರೂ ಅವರ

ವಿರುದ್ಧ ಆರೋಪ ಹೊರಿಸಿ ನಾನೇ ಮನೆ ಬಿಟ್ಟು ಹೋಗಿರುತ್ತೇನೆ ಎಂದರೆ ಸರಿಯಲ್ಲ. ನಾನು ಊರಿನಿಂದ ಬೆಂಗಳೂರಿಗೆ ವಾಪಸ್ಸು ಹೋಗಿರುತ್ತೇನೆ ಎಂದರೆ ನನ್ನ ಅತ್ತೆ ಮಾವ ಕಳುಹಿಸಿಕೊಟ್ಟಿರುತ್ತಾರೆ. ನನ್ನ ಮಾವ ನನಗೆ ದೈಹಿಕವಾಗಿ ಹಿಂಸೆ ಕೊಡುತ್ತಿದ್ದಾರೆ ಎಂದು ಆರೋಪ ಮಾಡಿದ ಕಾರಣ ನಾನೇ ಮನೆ ಬಿಟ್ಟು ಹೋಗಿರುತ್ತೇನೆ ಎಂದರೆ ಸರಿಯಲ್ಲ.

6. ಬೆಂಗಳೂರಿನಲ್ಲಿ ವಾಸ ಇದ್ದಾಗ ನಾನು ದೂರವಾಣಿ ಮುಖಾಂತರ ಮಾತನಾಡುತ್ತಿದ್ದು ಅದನ್ನು ಎದುರುದಾರರು ಪ್ರಶ್ನೆ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಈ ವಿಷಯಕ್ಕೆ ಸಂಬಂಧಪಟ್ಟಂತೆ ನಾನು ಎದುರುದಾರರ ಬಳಿ ಕ್ಷಮೆ ಕೇಳಿರುತ್ತೇನೆ ಎಂದರೆ ಸರಿಯಲ್ಲ. ಈ ವಿಚಾರವನ್ನು ದೃಷ್ಟೀಕರಣ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಾನು ದೂರವಾಣಿ ಮುಖಾಂತರ ಅಶ್ಲೀಲ ವಿಚಾರಗಳನ್ನು ಮಾತನಾಡಿದ್ದು ಅದರ ಬಗ್ಗೆ ಎದುರುದಾರರು ವಿಚಾರಿಸಿದ ಕಾರಣ ನಾನೇ ಸ್ವಇಚ್ಛೆಯಿಂದ ಮನೆ ಬಿಟ್ಟು ಬಂದಿರುತ್ತೇನೆ ಎಂದರೆ ಸರಿಯಲ್ಲ. ಈ ವಿಚಾರವಾಗಿ ಪ್ರಶ್ನೆ ಮಾಡಿರುವುದನ್ನು ಹೊರತುಪಡಿಸಿ ಎದುರುದಾರರು ನನಗೆ ಯಾವುದೇ ತೊಂದರೆ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ.

7. ನನ್ನ ಆಡಂಬರದ ಜೀವನಶೈಲಿಗಾಗಿ ಮತ್ತು ಎದುರುದಾರರ ಕಷ್ಟದಲ್ಲಿರುವ ಕಾರಣ ನಾನೇ ಮನೆ ಬಿಟ್ಟು ಬಂದಿರುತ್ತೇನೆ ಎಂದರೆ ಸರಿಯಲ್ಲ.

2ನೇ ಅರ್ಜಿದಾರರು ಜನಿಸಿದಾಗ ನನ್ನ ಅತ್ತೆ ಮಾವ ಬಂದು ನೋಡಿಕೊಂಡು ಹೋಗಿರುತ್ತಾರೆ ಎಂದರೆ ಸರಿ ಎದುರುದಾರರು ಬಂದಿರುತ್ತಾರೆ ಎಂದರೆ ಸರಿಯಲ್ಲ. ಈಗಲೂ ನಾನು ಕೆಲಸ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ಈಗಲೂ ನಾನು ಶಿಕ್ಷಕಿಯಾಗಿ ಕೆಲಸ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ಚಿಕ್ಕ ಮಗುವನ್ನು ನೋಡಿಕೊಂಡು ಮನೆಯಲ್ಲೇ ಇದ್ದೇನೆ.

8. ಎದುರುದಾರರ ಆದಾಯಕ್ಕೆ ಮತ್ತು ಕೆಲಸಕ್ಕೆ ಸಂಬಂಧಪಟ್ಟಂತೆ ದಾಖಲಾತಿ ಹಾಜರುಪಡಿಸಿದ್ದೀರ ಎಂದರೆ ಇಲ್ಲ. ಎದುರುದಾರರಿಗೆ ಯಾವುದೇ ಆದಾಯ ಇರುವುದಿಲ್ಲ ಮತ್ತು ಕೆಲಸ ಮಾಡುತ್ತಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ವರ್ತನೆಯಿಂದ ಮನನೊಂದು ಎದುರುದಾರರು ಎಲ್ಲಿ ಹೋಗಿರುತ್ತಾರೆ ಎಂಬುದರ ಬಗ್ಗೆ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ.

9. ಎದುರುದಾರರ ನನಗೆ ನೋಟೀಸ್ ನೀಡಿರುತ್ತಾರೆ ಎಂದರೆ ಸರಿ. ಸದರಿ ನೋಟೀಸ್ ನಲ್ಲಿ ಎದುರುದಾರರು ನನ್ನೊಂದಿಗೆ ಸಂಸಾರ ಮಾಡಬೇಕೆಂದು ಸೂಚನೆ ನೀಡಿರುತ್ತಾರೆ ಎಂದರೆ ಸರಿ. ಸದರಿ ಸೂಚನೆಯಂತೆ ನಾನು ನಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಹಿರಿಯರು ಸಂಸಾರ ಮಾಡಬೇಕೆಂದು ನನಗೆ ತಿಳಿ ಹೇಳಿದರೂ ಸಹ ನಾನು ನಿರಾಕರಿಸಿರುತ್ತೇನೆ ಎಂದರೆ ಸರಿಯಲ್ಲ. ಎದುರುದಾರರಿಗೆ ತೊಂದರೆ ಕೊಡಲು ಈ ಅರ್ಜಿ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ 5 ರಿಂದ

7 ನನ್ನ ಮಾವನ ಹೆಸರಿನಲ್ಲಿದೆ ಎಂದರೆ ಸರಿ. ಕೇವಲ ಜೀವನಾಂಶಕ್ಕಾಗಿ ನನ್ನ ತಪ್ಪಿದ್ದರೂ ಈ ಅರ್ಜಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಆದ ಕಾರಣ ಪರಿಹಾರ ಪಡೆಯಲು ನಾನು ಅರ್ಹಳಲ್ಲ ಎಂದರೆ ಸರಿಯಲ್ಲ. ಅರ್ಜಿಯಲ್ಲಿ ಕೇಳಿರುವ ಜೀವನಾಂಶವನ್ನು ಕೊಡಲು ಎದುರುದಾರರು ಅರ್ಹರಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಿರುತ್ತೇನೆ.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

(ಶ್ರೀಮತಿ ಸ್ನೇಹಾ ಎಂ.)
ವ್ಯವಹಾರ ನ್ಯಾಯಾಧೀಶರು,
ಮತ್ತು ಜೆಎಂಎಫ್ ಸಿ, ಆಲೂರು .